# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 112 |
| ಸದಸ್ಯರ ಹೆಸರ | : | ಶ್ರೀ ಎಸ್.ನಾಗರಾಜ್ (ಸಂದೇಶ್ ನಾಗರಾಜ್) |
| ಉತ್ತರಿಸಬೇಕಾದ ದಿನಾಂಕ | : | 10.07.2018 |
| ಉತ್ತರಿಸಬೇಕಾದವರು | : | ನಗರಾಭಿವೃದ್ಧಿ ಹಾಗೂ ವಸತಿ ಸಚಿವರು |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು-ಹುಣಸೂರು ರಸ್ತೆಯ, ಹಿನಕಲ್ ಜಂಕ್ಷನ್ ಬಳಿ ರಿಂಗ್ ರೋಡ್‌ಗೆ ಅಡ್ಡಲಾಗಿ ನಿರ್ಮಿಸುತ್ತಿರುವ ಫ್ಲೈಓವರು ಕಾಮಗಾರಿ ಕುಂಠಿತಗೊಂಡು ನಿಧಾನಗತಿಯಲ್ಲಿ ಸಾಗುತ್ತಿರುವುದರಿಂದ ಸಾರ್ವಜನಿಕರಿಗೆ, ವಾಹನ ಸಂಚಾರಕ್ಕೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾಮಗಾರಿಯು ಪ್ರಗತಿಯಲಿದ್ದು, ಸ್ಥಳದಲ್ಲಿ ಅಡ್ಡಲಾಗಿ ಬಂದ ನೀರು ಸರಬರಾಜು ಕೊಳವೆಗಳ ಮಾರ್ಗ ಬದಲಾವಣೆಯಿಂದಾಗಿ ವಿಳಂಬವಾಗಿದೆ. ಸಂಚಾರಿ ಪೊಲೀಸ್ ಇಲಾಖೆಯೊಂದಿಗೆ ಸಮನ್ವಯ ಸಾಧಿಸಿ ಸಾರ್ವಜನಿಕರಿಗೆ ಅನಾನುಕೂಲವಾಗದಂತೆ ಸಹ ಬದಲಿ ಮಾರ್ಗದಲ್ಲಿ ಸಂಚರಿಸಲು ಅಧಿಸೂಚನೆ ಹೊರಡಿಸಲಾಗಿದೆ. |
| ಆ) | ಈ ಕಾಮಗಾರಿಯ ಅಂದಾಜು ವೆಚ್ಚ ಎಷ್ಟು; ಕಾಮಗಾರಿ ಯಾವಾಗ ಮುಕ್ತಾಯವಾಗಬೇಕಾಗಿತ್ತು; ಪದೇ ಪದೇ ಅವಧಿ ವಿಸ್ತರಣೆಗೆ ಕಾರಣಗಳೇನು; ಈ ಕಾಮಗಾರಿಯನ್ನು ದಸರಾ ಹಬ್ಬದ ಒಳಗೆ ಪೂರ್ಣಗೊಳಿಸಲು ಕ್ರಮ ಜರುಗಿಸಲಾಗುವುದೇ; | ಕಾಮಗಾರಿಯ ಅಂದಾಜು ವೆಚ್ಚ ರೂ. 1518.00 ಲಕ್ಷಗಳು.<br>ಮೂಲ ಒಪ್ಪಂದದಂತೆ ಕಾಮಗಾರಿಯನ್ನು ದಿನಾಂಕ 31.12.2017 ರಂದು ಮುಕ್ತಾಯಗೊಳಿಸಬೇಕಾಗಿತ್ತು. ಆದರೆ ಕಾಮಗಾರಿ ನಿರ್ವಹಿಸುತ್ತಿರುವ ಸ್ಥಳದಲ್ಲಿ ಆರ್.ಎಂ.ಪಿ ಹಾಗೂ ಹಿನಕಲ್ ಗ್ರಾಮಕ್ಕೆ ಸರಬರಾಜಾಗುವ ನೀರಿನ ಕೊಳವೆಗಳು ಹಾದುಹೋಗುತ್ತಿದ್ದುದರಿಂದ ಈ Utility ಗಳನ್ನು ಸ್ಥಳಾಂತರಿಸುವ ಅನಿವಾರ್ಯತೆ ಇದ್ದುದರಿಂದ ಮಹಾನಗರ ಪಾಲಿಕೆಯೊಂದಿಗೆ ಸಮನ್ವಯ ಸಾಧಿಸಿ ಪೈಪುಗಳ ಮಾರ್ಗ ಬದಲಾವಣೆಗೆ ಕಾಲಾವಕಾಶ ಬೇಕಾಗಿದ್ದರಿಂದ ಕಾಮಗಾರಿಯೂ ವಿಳಂಬವಾಗಿರುತ್ತದೆ. ಈಗ ಕಾಮಗಾರಿಯನ್ನು ದಸರಾ ಹಬ್ಬದೊಳಗೆ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದು. |
| ಇ) | ಕೊಲಂಬಿಯಾ ಏಷಿಯಾ ಆಸ್ಪತ್ರೆ ಮತ್ತು ಬಂಡಿಪಾಳ್ಯ ರಿಂಗ್ ರೋಡ್ ಜಂಕ್ಷನ್‌ಲ್ಲಿ ದಿನ ನಿತ್ಯ ಟ್ರಾಫಿಕ್ ಜಾಮ್ ಆಗುತ್ತಿದ್ದು, ಇಲ್ಲಿಯೂ ಕೂಡಾ ಫ್ಲೈಓವರ್ ಅಥವಾ ಗ್ರೇಡ್ ಸಪರೇಟರ್ ನಿರ್ಮಾಣ ಮಾಡಲು ಕ್ರಮ ಜರುಗಿಸಲಾಗುವುದೇ; ಈ ಬಗ್ಗೆ ಸರ್ವೆ ಮಾಡಿ ಡಿಪಿಆರ್ ತಯಾರಿಸಲು ಕಾಮಗಾರಿ ಪ್ರಾರಂಭಿಸಲು ತಕ್ಷಣ ಕ್ರಮ ಜರುಗಿಸಲಾಗುವುದೇ? | ಕೊಲಂಬಿಯಾ ಏಷಿಯಾ ಆಸ್ಪತ್ರೆ ಹತ್ತಿರ ನಿರ್ಮಾಣಗೊಳ್ಳಲು ಉದ್ದೇಶಿಸಿದ್ದ ಫ್ಲೈಓವರ್ ಕಾಮಗಾರಿಯು ಮಂಜೂರಾಗಿ ಟೆಂಡರ್ ವಹಿಸಲಾಗಿತ್ತಾದರೂ ಕಾಮಗಾರಿಯನ್ನು ಪ್ರಾರಂಭಿಸುವ ವೇಳೆ ಸದರಿ ರಸ್ತೆ ರಾಷ್ಟ್ರೀಯ ಹೆದ್ದಾರಿಯಾಗಿ ಘೋಷಿಸಿ ಅಧಿಸೂಚನೆ ಹೊರಡಿಸಿದ್ದರಿಂದ ರಾಷ್ಟ್ರೀಯ ಹೆದ್ದಾರಿ ಇಲಾಖೆಗೆ ಹಸ್ತಾಂತರಗೊಂಡ ಕಾರಣ ಮತ್ತು ಸದರಿ ರಸ್ತೆಯನ್ನು ಷಟ್ಪಥ ನಿರ್ಮಿಸಲು ಯೋಜನೆ |

| | | |
|---|---|---|
| | | ರೂಪಗೊಂಡ ಕಾರಣ 25ನೇ- ರಾಜ್ಯ ಮಟ್ಟದ ಅಧಿಕಾರಯುಕ್ತ ಸಮಿತಿಯ (ಎಸ್.ಎಲ್.ಇ.ಪಿ) ಸಭೆಯ ದಿನಾಂಕ 04.05.2017 ರಂದು ಕೈಗೊಂಡ ತೀರ್ಮಾನದಂತೆ ಸದರಿ ಕಾಮಗಾರಿಯನ್ನು ಪ್ರಾಧಿಕಾರದ ವತಿಯಿಂದ ನಿರ್ಮಿಸಲು - ಕೈಬಿಡಲಾಗಿದೆ. ಮುಂದುವರೆದು ದಿನಾಂಕ 15.05.2017 ರಂದು ಪ್ರಾಧಿಕಾರ ನಿರ್ಮಿಸಿರುವ ಹೊರವರ್ತುಲ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯ ಇಲಾಖೆಗೆ ಹಸ್ತಾಂತರಿಸಲಾಗಿದೆ.<br>ಬಂಡೀಪಾಳ್ಯ ಹತ್ತಿರ ನಿರ್ಮಿಸಲು ಉದ್ದೇಶಿರುವ ಫ್ಲೈಓವರ್ ಹಾಲಿ ರಾಷ್ಟ್ರೀಯ ಹೆದ್ದಾರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ. |

ನಅಇ 234 ಮೈಅಪ್ರಾ 2018

(ಯು.ಟಿ. ಖಾದರ್)
ನಗರಾಭಿವೃದ್ಧಿ ಹಾಗೂ ವಸತಿ ಸಚಿವರು